**Date: 04-11-2024** **OS No. 87/2019**

**( DW - 1 )**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ- ವಾದಿಯ ಪರ ಶ್ರೀ. ಎನ್.ಎಸ್.ಜಿ. ವಕೀಲರಿಂದಃ

ನಾನು ಶಾಲೆ ಓದಿಲ್ಲ. 3ನೇ ಪ್ರತಿವಾದಿ ದುಂಡವ್ವ ಸಹ ಶಾಲೆ ಕಲಿತಿಲ್ಲ. ನನ್ನ ಅಕ್ಕ ವಾದಿ ರತ್ನವ್ವ ಸಹ ಶಾಲೆ ಓದಿಲ್ಲ. ವಾದಿ ರತ್ನವ್ವನ ಮದುವೆಯಾಗಿ 40 ವರ್ಷ ಆಗಿದೆ ಎಂದರೆ ನಿಜ. ವಾದಿಯ ಮದುವೆಯಾಗುವ ಮೊದಲೆ 3ನೇ ಪ್ರತಿವಾದಿ ದುಂಡವ್ವನ ಮದುವೆಯಾಗಿದೆ. ನನ್ನ ಮದುವೆಯಾಗಿ ಸುಮಾರು 35 ವರ್ಷ ಆಗಿದೆ. ನನ್ನ ತಂದೆ-ತಾಯಿ ನನ್ನ ಮತ್ತು ದುಂಡವ್ವನ ಮಾತು ಮಾತ್ರ ಕೇಳುತ್ತಿದ್ದರು ಎಂದರೆ ಸರಿಯಲ್ಲ. ನಾನು ಮತ್ತು ದುಂಡವ್ವ ವಾದಿಯ ದಾವೆದ ಆಸ್ತಿಗಳ ಜಂಟಿ ವಹಿವಾಟಿಗೆ ತಕರಾರು ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ನಾವು ಅವಳ ವೆಹಿವಾಟಿಗೆ ತಕರಾರು ಮಾಡಿದ್ದರಿಂದ ಅವಳು ನಮ್ಮ ಜೊತೆ ಜಂಟಿಯಾಗಿ ವಹಿವಾಟು ಮಾಡಲು ಆಗುವುದಿಲ್ಲ, ತನ್ನ ಹಿಸ್ಸೆ ಕೊಡುವಂತೆ ನಮ್ಮನ್ನು ಕೇಳುತ್ತಿದ್ದಳು ಎಂದರೆ ಸರಿಯಲ್ಲ. 5ನೇ ಪ್ರತಿವಾದಿ ಸಂಜೀವ ನನ್ನ ಕಾಕನ ಮಗ ಎಂದರೆ ನಿಜ. ಪ್ರತಿವಾದಿಯರಾದ ನಾವು ವಾದಿಗೆ ದಾವೆದ ಆಸ್ತಿಯಲ್ಲಿಯ ಹಿಸ್ಸೆ ಎತ್ತಿಹಾಕಬೇಕು ಅನ್ನುವ ಉದ್ದೇಶದಿಂದ ಸ.ನಂ.139/2 ರ ಬಗ್ಗೆ ಒಂದು ಪೋಕಳ್ ಖರೀದಿ ಪತ್ರವನ್ನು 5ನೇ ಪ್ರತಿವಾದಿ ಹೆಸರಿಗೆ ಮಾಡಿದ್ದೇವೆ ಎಂದರೆ ಸರಿಯಲ್ಲ. ದಾವೆದ ಆಸ್ತಿಗಳಿಂದ ನನ್ನ ತಂದೆಗೆ ಸಾಕಷ್ಟು ಆದಾಯ ಇದ್ದುದ್ದರಿಂದ ನಮ್ಮ ಕುಟುಂಬಕ್ಕೆ ಯಾವತ್ತು ಹಣಕಾಸಿನ ಅಡಚಣೆ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಸಾಲ ಇತ್ತು ಅಂತ ತೋರಿಸಲು ಯಾವುದೆ ದಾಖಲೆಗಳು ಇರುವುದ್ಲಿ ಅಂದರೆ ನಿಜ. ದಾವೆದ ಆಸ್ತಿಗಳಲ್ಲಿ ವಾದಿಗೆ 1/5 ಹಿಸ್ಸೆ ಇದೆ ಎಂದರೆ ನಿಜ. ಆದರೆ ನನ್ನ ತಂದೆ-ತಾಯಿಯರನ್ನು ವಾದಿ ಸಹ ಜೋಪಾನ ಮಾಡಬೇಕು ಅಂತ

**Date: 04-11-2024**　　　　　　**OS No. 87/2019**

**<u>( DW - 1 )</u>**

ಹೇಳುತ್ತಾರೆ. ವಾದಿ ಮೊದಲಿನಿಂದಲು ನನ್ನ ತಂದೆ-ತಾಯಿಯ ಯೋಗಕ್ಷೇಮ ನೋಡುತ್ತಾ ಬಂದಿದ್ದಾಳೆ ಎಂದರೆ ಸಾಕ್ಷಿ ಮೊದಲು ಜೋಪಾನ ಮಾಡಿದಳು, ಈಗ ಅವರನ್ನು ನೋಡುವುದಿಲ್ಲ ಅಂತ ಹೇಳುತ್ತಾರೆ. ನಾನು, ನನ್ನ ತಂದೆ-ತಾಯಿ 5ನೇ ಪ್ರತಿವಾದಿ ಹೆಸರಿಗೆ ಪೋಕಳ್ ಖರೀದಿ ಪತ್ರ ಮಾಡಿಕೊಟ್ಟ ವಿಷಯ ವಾದಿಗೆ ಗೊತ್ತಾದ ನಂತರ ಅವಳು 2019ರಲ್ಲಿ ನಮಗೆ ಭೇಟಿಯಾಗಿ ತನ್ನ ಪಾಲು ಕೊಡುವಂತೆ ಕೇಳಿದ್ದಳು ಎಂದರೆ ನನಗೆ ಗೊತ್ತಿಲ್ಲ. ನಾವು ವಾದಿಗೆ ಪಾಲು ಕೊಡದೇ ಇದ್ದುದ್ದರಿಂದ ಅವಳು ಕೋರ್ಟಿಗೆ ಕೇಸ್ ಹಾಕಿದ್ದಾಳೆ ಎಂದರೆ ಸಾಕ್ಷಿ ಅವಳು ನನಗೆ ಪಾಲು ಕೇಳಿಲ್ಲ ಅಂತ ಹೇಳುತ್ತಾರೆ. ವಾದಿ ಈ ಕೇಸ್ ದಾಖಲಿಸುವವರೆಗು ನನ್ನ ತಂದೆ-ತಾಯಿ ಯೋಗಕ್ಷೇಮ ನೊಡುತ್ತಿದ್ದಳು ಎಂದರೆ ಸಾಕ್ಷಿ ಅವಳು ಬಂದಿ ಹೋಗಿ ಮಾಡುತ್ತಿದ್ದಳು ಅಂತ ಹೇಳುತ್ತಾರೆ. ವಾದಿ ನನ್ನ ತಂದೆ-ತಾಯಿಯನ್ನು ಜೋಪಾನ ಮಾಡಿದರು ಸಹ ಅವಳು ಕೇವಲ ಬಂದು ಹೋಗಿ ಮಾಡುತ್ತಿದ್ದಳು ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ನಮ್ಮ ಮಧ್ಯ ಯಾವುದೆ ವಾಟ್ನಿ ಆಗದೆ ಇರುವುದರಿಂದ ನನಗೆ, ನನ್ನ ತಂದೆ-ತಾಯಿ ಮತ್ತು ನನ್ನ ಸಹೋದರಿಗೆ 5ನೇ ಪ್ರತಿವಾದಿ ಹೆಸರಿಗೆ ಖರೀದಿ ಪತ್ರ ಬರೆದುಕೊಡುವ ಯಾವುದೆ ಹಕ್ಕು ಇರಲಿಲ್ಲ ಎಂದರೆ ಸಾಕ್ಷಿ ವಾದಿ ಖರೀದಿಗೆ ಸಹಿ ಮಾಡುತ್ತಾಳೆ ಅಂನತ ತಿಳಿದು ನಾನು ಸಹಿ ಮಾಡಿದ್ದೇನೆ ಅಂತ ಹೇಳುತ್ತಾರೆ. 5ನೇ ಪ್ರತಿವಾದಿಯ ಹೆಸರಿಗೆ ಆದ ಖರೀದಿ ಪತ್ರಕ್ಕೆ ವಾದಿ ಸಹಿ ಮಾಡಿಲ್ಲ ಎಂದರೆ ನಿಜ. ವಾದಿ ಕ್ರಯ ಪತ್ರದ ದಿನಾಂಕದಂದು ನೋಂದಣೆ ಕಚೇರಿಗೆ ಬರುತ್ತೇನೆ ಅಂತ ಹೇಳಿ ಬಂದಿರುವುದಿಲ್ಲ ಅಂತ ನಾನು ನನ್ನ ಸಾಕ್ಷಿಯಲ್ಲಿ ಮತ್ತು ತಕರಾರಿನಲ್ಲಿ ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. 5ನೇ ಪ್ರತಿವಾದಿಗೆ ಜಮೀನು ಮಾರಾಟ ಕೊಡುವ ವಿಷಯ ಲೇಖಿ ಮುಖಾಂತರ ವಾದಿಗೆ ತಿಳಿಸಲು ನಮಗೆ ಯಾವುದೆ ತೊಂದರೆ ಇರಲಿಲ್ಲ. ಕ್ರಯ ಪತ್ರದಲ್ಲಿ

**Date: 04-11-2024** **OS No. 87/2019**

**( DW - 1 )**

ನಮೂದಿಸಿದ ಹಣ 5ನೇ ಪ್ರತಿವಾದಿ ನಮಗೆ ಕೊಡದೆ ಇದ್ದರು ಸಹ, ದಾಖಲೆ ಹುಟ್ಟಿಸಲು ಸುಳ್ಳು ಬರೆದಿದ್ದೇವೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಅಕ್ಕ ದುಂಡವ್ವ ನಮ್ಮ ಕುಟುಂಬಕ್ಕೆ ಯಾವುದೆ ಹಣದ ಅಡಚಣೆ ಇರದೆ ಇದ್ದರು ಸಹ 5ನೇ ಪ್ರತಿವಾದಿ ಹೆಸರಿಗೆ ಪೋಕಳ್ ಖರೀದಿ ಪತ್ರ ಹುಟ್ಟಿಸಿ, ಸುಳ್ಳು ತಕರಾರು ಹಾಕಿದ್ದೇವೆ ಎಂದರೆ ಸರಿಯಲ್ಲ. 5ನೇ ಪ್ರತಿವಾದಿ ಹೆಸರಿಗೆ ಮಾಡಿದ ಖರೀದಿ ಪತ್ರ ವಾದಿಯ ಕಾನೂನು ಬದ್ದ ಹಿಸ್ಸೆಗೆ ಬಂಧನಕಾರಿಯಾಗುವುದಿಲ್ಲ ಎಂದರೆ ಸರಿಯಲ್ಲ. ಖರೀದಿ ಪತ್ರದ ಆಧಾರದ ಮೇಲೆ 5ನೇ ಪ್ರತಿವಾದಿ ಯಾವತ್ತು ದಾವೆದ ಆಸ್ತಿಯ ಕಬ್ಜ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ವಾದಿಗೆ ಲುಕ್ಷಾನ ಮಾಡುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಹುಟ್ಟಿಸಿದ್ದೇವೆ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

Sd/-

ಹಿರಿಯ ದಿವಾಣಿ ನ್ಯಾಯಾಧೀಶರು , ಹುಕ್ಕೇರಿ.